(ಬಿ) 1997-98 - ರೂ.171-00
(2-1-98ರವರೆಗೆ)

3. 1996-97 - ರೂ.471-00

(ಇ) ಪ್ರಸಕ್ತ ಆರ್ಥಿಕ ವರ್ಷದಲ್ಲಿ (ಅಂದರೆ 2000-01)ಯೂ ಸಹ ಭಾಗ್ಯಜ್ಯೋತಿ ಯೋಜನೆಯಡಿಯ ವಿದ್ಯುದೀಕರಣಕ್ಕೆ ಪ್ರತಿ ಮನೆಗೆ ರೂ. 511-00ಕ್ಕೆ ಮಿಾರದಂತೆ ಹಣ ಪಾವತಿ ಮಾಡಲಾಗುತ್ತಿದೆ.

ಬೈಂದೂರು ಕ್ಷೇತ್ರಕ್ಕೆ ವಿದ್ಯುತ್ ಹ್ಯಾಮ್ಲೆಟ್ ಯೋಜನೆ ಬಗ್ಗೆ

1809 (2531) ಶ್ರೀ ಗೋಪಾಲ ಪೂಜಾರಿ. ಕೆ. (ಬೈಂದೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ವಿದ್ಯುತ್ ಹ್ಯಾಮ್ಲೆಟ್ ಯೋಜನೆಯಲ್ಲಿ ಬೈಂದೂರು ಕ್ಷೇತ್ರಕ್ಕೆ ಈವರೆವಿಗೆ ಎಷ್ಟು ಪ್ರಸ್ತಾವನೆ;

(ಆ) ಎಷ್ಟು ಗ್ರಾಮಗಳು ಈ ಯೋಜನೆ ಅನುಷ್ಠಾನಗೊಳ್ಳಲು ಬಾಕಿ ಉಳಿದಿದೆ;

(ಇ) ಇದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ಬೈಂದೂರು ಕ್ಷೇತ್ರದಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ಸಂಬಂಧಿಸಿದಂತೆ, 10 ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಮಂಜೂರಾತಿ ದೊರಕಿರುತ್ತದೆ.

(ಆ) ಮಂಜೂರಾತಿ ದೊರಕಿರುವ ಎಲ್ಲಾ 10 ಹ್ಯಾಮ್ಲೆಟ್‌ಗಳು ಈ ಯೋಜನೆಯ ಅನ್ವಯ ಅನುಷ್ಠಾನಕ್ಕಾಗಿ ಬಾಕಿ ಉಳಿದಿವೆ.

(ಇ) ಪ್ರಸಕ್ತ ವರ್ಷವಾದ 2000-2001ರಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ತಾಲ್ಲೂಕುವಾರು ಗುರಿಗಳನ್ನು ನಿಗಧಿಪಡಿಸಿರಬೇಕಾಗುತ್ತದೆ. ಕುಂದಾಪುರ ತಾಲ್ಲೂಕಿಗೆ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕಾಗಿ ನಿಗದಿಪಡಿಸಲಾಗುವ ಗುರಿಗೆ ತಕ್ಕಂತೆ ವಿದ್ಯುದೀಕರಣ ಕಾರ್ಯವನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದು.

ಬೀದರ್‌ನ ನೀರಾವರಿ ಇಲಾಖೆಯಲ್ಲಿ ನಡೆದಿರುವ ಅವ್ಯವಹಾರಗಳು

1810 (2291) ಶ್ರೀ ಗುಂಡಪ್ಪ ವಕೀಲ್ (ಔರಾದ್):

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1998-99ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆ ಬೀದರ್‌ನಲ್ಲಿ 30 ಕೋಟಿ ರೂ. ಹಗರಣ ನಡೆದಿದ್ದು, ಇಲಾಖೆಗೆ ಬೇಕಾಗುವ ವಸ್ತುಗಳ ಖರೀದಿ ಇಲ್ಲದೆ ಸುಳ್ಳು ದಾಖಲೆ ಸೃಷ್ಟಿಸಿ ಹಣ ಲೂಟಿ ನಡೆದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಪೂರ್ಣ ವಿವರ ನೀಡುವುದು?

ಶೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

(ಅ) ಬಂದಿದೆ.

(ಆ) 1998-99ನೇ ಸಾಲಿನಲ್ಲಿ ಸಣ್ಣ ನೀರಾವರಿ ವಿಭಾಗ ಬೀದರ್‌ನಲ್ಲಿ ಉಗ್ರಾಣ ಸಾಮಗ್ರಿಗಳ ಖರೀದಿಯಲ್ಲಿ ಅವ್ಯವಹಾರ ಕಂಡು ಬಂದ ಪ್ರಯುಕ್ತ ಸರ್ಕಾರವು ಈ ಕೆಳಗಿನಂತೆ ಕ್ರಮ ಕೈಗೊಂಡಿದೆ:

1. ಶ್ರೀ ಎಸ್.ಡಿ. ಹೊಂಗಲ್, ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಬೀದರ್ ಇವರನ್ನು ಅಮಾನತ್ತುಗೊಳಿಸಲಾಗಿದೆ.

2. ಶ್ರೀ ಹೆಚ್.ಎಂ. ಜ್ಞಾನಪ್ರಕಾಶ, ಪ್ರಥಮ ದರ್ಜೆ ಉಗ್ರಾಣಪಾಲಕರು ಇವರನ್ನು ಅಮಾನತ್‌ನಲ್ಲಿರಿಸಿ ನಂತರ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್‌ನ್ನು ರದ್ದುಗೊಳಿಸಿ ಸಣ್ಣ ನೀರಾವರಿ ಬೀದರ್ ವಿಭಾಗದಿಂದ ಸಣ್ಣ ನೀರಾವರಿ ವಿಭಾಗ ಧಾರವಾಡಕ್ಕೆ ವರ್ಗಾವಣೆ ಮಾಡಲಾಗಿದೆ.

3. ಪ್ರಕರಣವು ಇನ್ನೂ ವಿಚಾರಣೆ ಹಂತದಲ್ಲಿದೆ.

ಔರಾದ್ ತಾಲ್ಲೂಕಿನ ನಾಗನಪಲ್ಲಿ ಹಾಗೂ ಮಂಗನಾಳ ಗ್ರಾಮದ ಕೆರೆಗಳಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

1811 (2292) ಶ್ರೀ ಗುಂಡಪ್ಪ ವಕೀಲ್ (ಔರಾದ್):

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಔರಾದ್ ತಾಲ್ಲೂಕಿನ ನಾಗಪಲ್ಲಿ ಹಾಗೂ ಮಂಗನಾಳ ಗ್ರಾಮಗಳಲ್ಲಿ ಕೆರೆ ನಿರ್ಮಾಣವಾಗಿದೆ ಎಂದು ಸುಳ್ಳು ದಾಖಲೆ ನಿರ್ಮಾಣ ಮಾಡಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು).

ಶೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

(ಅ) ಸುಳ್ಳು ದಾಖಲೆ ಮಾಡಿರುವುದು ನಿಜವಲ್ಲ. ಔರಾದ್ ತಾಲ್ಲೂಕಿನ ನಾಗನಪಲ್ಲಿ ಕೆರೆಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ, ಇನ್ನೂ ನಿರ್ಮಾಣವಾಗಿರುವುದಿಲ್ಲ. ಸದರಿ